ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ : 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

**ಸಂಖ್ಯೆ : ವಾಇ : ಜಂ ನಿ : ಸುಮಪ : 2020–21 : ಮೇ 9, 2020**

# ಪತ್ರಿಕಾ ಪ್ರಕಟಣೆ

## ಆಟೋ ಹಾಗೂ ಟ್ಯಾಕ್ಸಿ ಚಾಲಕರಿಗೆ ಪರಿಹಾರ

ಬೆಂಗಳೂರು, ಮೇ 9 ( ಕರ್ನಾಟಕ ವಾರ್ತೆ )

ರಾಜ್ಯಾದ್ಯಂತ ಕೊರೋನಾ ವೈರಾಣು (ಕೋವಿಡ್ –19) ಸಂಬಂಧ ಲಾಕ್ ಡೌನ್ ಹಿನ್ನೆಲೆಯಲ್ಲಿ ಆಟೋ ಹಾಗೂ ಟ್ಯಾಕ್ಸಿ ಚಾಲಕರುಗಳಿಗೆ ಒಂದು ಬಾರಿ ಪರಿಹಾರವಾಗಿ ರೂ. 5,000/– ಗಳನ್ನು ನೀಡಲಾಗುವುದು.

ಪರಿಹಾರಧನ ನೀಡಲು ಅರ್ಜಿಗಳನ್ನು ಆನ್‌ಲೈನ್‌ನಲ್ಲಿ "ಸೇವಾಸಿಂದು" ಪೋರ್ಟಲ್ ನ ಮೂಲಕ ಸ್ವೀಕರಿಸುವ ವ್ಯವಸ್ಥೆ ಮಾಡಲಾಗುತ್ತಿದೆ. ಆದ್ದರಿಂದ ಆಟೋರಿಕ್ಷಾ/ಟ್ಯಾಕ್ಸಿ ಚಾಲಕರುಗಳು ಅರ್ಜಿಗಳನ್ನು ಸಲ್ಲಿಸಲು ಅನವಶ್ಯಕವಾಗಿ ಪರಿಶ್ರಮ ಪಡುವ ಅವಶ್ಯಕತೆ ಇರುವುದಿಲ್ಲ. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಎಲ್ಲಾ ಅರ್ಹ ಆಟೋ/ಟ್ಯಾಕ್ಸಿ ಚಾಲಕರುಗಳಿಗೆ ಪರಿಹಾರಧನವನ್ನು ಅವರ ಖಾತೆಗೆ ನೇರವಾಗಿ ವರ್ಗಾಯಿಸಲಾಗುವುದು ಎಂದು ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ ಬೆಂಗಳೂರು ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಿದ್ದ ಉಡುಪು ಘಟಕಗಳಲ್ಲಿ ಕಾರ್ಯನಿರ್ವಹಣೆ

ಬೆಂಗಳೂರು, ಮೇ 9 ( ಕರ್ನಾಟಕ ವಾರ್ತೆ )

ರಾಜ್ಯಾದ್ಯಂತ ಕೊರೋನಾ ವೈರಾಣು (ಕೋವಿಡ್ –19) ಸಂಬಂಧ ಲಾಕ್ ಡೌನ್ ಹಿನ್ನೆಲೆಯಲ್ಲಿ ಕಂಟೈನ್‌ಮೆಂಟ್ ವಲಯ ಹೊರಗಿನ ಕೆಂಪು ವಲಯ ಜಿಲ್ಲೆಗಳಲ್ಲಿ ಮಾನ್ಯತೆ ಪಡೆದ ಐ ಇ ಸಿ ಕೋಡ್‌ನೊಂದಿಗೆ ರಫ್ತುಬದ್ದತೆಗಳನ್ನು ಹೊಂದಿರುವ ಮತ್ತು ಸಿದ್ದ ಉಡುಪು ರಫ್ತು ಪ್ರಚಾರ ಮಂಡಳಿಯಲ್ಲಿ (ಎಇಪಿಸಿ) ನೋಂದಾಯಿಸಲಾದ ಉಡುಪು ಘಟಕಗಳು ಒಟ್ಟು ಕಾರ್ಮಿಕರ ಸಂಖ್ಯೆ 1/3 ಭಾಗದಷ್ಟು ಕಾರ್ಮಿಕರೊಂದಿಗೆ ನಿಗದಿತ ಎಸ್‌ಒಪಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಷರತ್ತಿಗೊಳಪಟ್ಟು ಕಾರ್ಯನಿರ್ವಹಿಸಲು ಮುಖ್ಯ ಕಾರ್ಯದರ್ಶಿ ಹಾಗೂ ಕರ್ನಾಟನ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಕಾರ್ಯಕಾರಿ ಸಮಿತಿ ಅಧ್ಯಕ್ಷರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬಾಡಿಗೆ ಆಧಾರದಲ್ಲಿ ಬಸ್ಸುಗಳನ್ನು ಪಡೆಯಲು ಅನುಮತಿ

**ಬೆಂಗಳೂರು, ಮೇ 9 ( ಕರ್ನಾಟಕ ವಾರ್ತೆ )**

**ರಾಜ್ಯಾದ್ಯಂತ ಕೊರೋನಾ ವೈರಾಣು (ಕೋವಿಡ್ –19) ಸಂಬಂಧ ಲಾಕ್ ಡೌನ್ ಹಿನ್ನೆಲೆಯಲ್ಲಿ ಕಾರ್ಮಿಕರು, ಯಾತ್ರಾರ್ಥಿಗಳು, ಪ್ರವಾಸಿಗರು, ವಿದ್ಯಾರ್ಥಿಗಳು ಮತ್ತು ಇತರ ವ್ಯಕ್ತಿಗಳು ಕರ್ನಾಟಕದಿಂದ ಇತರೆ ರಾಜ್ಯಗಳಿಗೆ ಪ್ರಯಾಣಿಸಲು ಪಾವತಿ ಆಧಾರದ ಮೇಲೆ ಎಲ್ಲಾ ಕೆ.ಎಸ್.ಆರ್.ಟಿ.ಸಿ./ಎನ್.ಡಬ್ಲ್ಯೂ ಕೆ.ಆರ್.ಟಿ.ಸಿ. /ಎನ್.ಇ.ಕೆ.ಆರ್.ಟಿ.ಸಿ. ಬಸ್ಸುಗಳನ್ನು ಬಾಡಿಗೆಗೆ ನೀಡಬಹುದು. ಇದೇ ರೀತಿಯ ಸೌಲಭ್ಯವನ್ನು ಕೈಗಾರಿಕಾ ಚಟುವಟಿಕೆಗಳಿಗೆ ಕಾರ್ಮಿಕರಿಗೂ ಸಹಾ ಪಾವತಿ ಆಧಾರದ ಮೇಲ್ ನೀಡಬಹುದು ಎಂದು ಸರ್ಕಾರದ ಪ್ರಧಾನ ಕಾರ್ಯದರ್ಶಿ ಹಾಗೂ ಸದಸ್ಯ ಕಾರ್ಯದರ್ಶಿ ರಾಜ್ಯ ಕಾರ್ಯಕಾರಿ ಸಮಿತಿ, ಕಂದಾಯ ಇಲಾಖೆ(ವಿಪತ್ತು ನಿರ್ವಹಣೆ) ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.**

## Animal adopted

Bannerghatta Biological Park (BBBP) is delighted to announce Sri M. Krishnappa, MLA, Bangalore South Constituency visited Bannerghatta Biological Park support our efforts in ex-situ conservation. He has appreciated efforts of animal keepers, staff and Assistant Director (V.S).

He adopted Elephant Nisargha, aged about 17 years and Tigress Hima, aged about one and a half year by paying Rs. 2,75,000/-. Along with the MLA, the following donors also adopted animals. T. Narayana and Mrs. Lalitha, BBMP Corporator, Gottigere adopted Tiger Rajendra by paying 1.00 lakh M.C Raju, Ex- chairman, Jigani adopted tiger Gokul by paying 1.00 lakh M. Jayaram, Chunchughatta, Bangalore adopted Leopard - Lokesh by paying 35,000/- M Subramani Chunchughatta, Bangalore adopted Leopard - Ashoka by paying 35,000/ Sardar Sheryar Khan adopted tiger Sanjay for 6 months by paying Rs. 50,000/- K Somshekar, Anjanapur adopted zebra by paying Rs.50,000/- says official press release.